# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 198

ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 28.01.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕಲಬುರಗಿ ಜಿಲ್ಲೆಯಲ್ಲಿ ಸದ್ಯ ಸಂಚರಿಸುತ್ತಿರುವ ಕೆ.ಕೆ.ಆರ್.ಟಿ.ಸಿ ಬಸ್‌ಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಕಾಲಾವಧಿ ಮುಗಿದ (Old/Scrap condition) ಬಸ್‌ಗಳ ಸಂಖ್ಯೆ ಎಷ್ಟು; | ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯಲ್ಲಿನ ಕಲಬುರಗಿ ಜಿಲ್ಲೆಯು ಎರಡು ವಿಭಾಗಗಳನ್ನು ಹೊಂದಿದ್ದು, ಸದರಿ ಎರಡು ವಿಭಾಗಗಳಲ್ಲಿ ಒಟ್ಟು 1012 ಬಸ್‌ಗಳು ಸಂಚರಿಸುತ್ತಿವೆ.<br><br>ಕೇಂದ್ರ ಸರ್ಕಾರದ ಆದೇಶದನ್ವಯ ಸರ್ಕಾರಿ ಬಸ್‌ಗಳನ್ನು ನಿರುಪಯುಕ್ತಗೊಳಿಸಲು 15 ವರ್ಷ ವಯೋಮಾನವನ್ನು ನಿಗದಿಪಡಿಸಿದ್ದು, 15 ವರ್ಷ ಪೂರ್ಣಗೊಂಡ ವಾಹನಗಳನ್ನು ಕಡ್ಡಾಯವಾಗಿ ನಿರುಪಯುಕ್ತಗೊಳಿಸಲಾಗುತ್ತಿದೆ. ಹಾಗಾಗಿ ಅವಧಿ ಮೀರಿರುವ ಬಸ್‌ಗಳು ನಿಗಮದಲ್ಲಿ ಯಾವುದು ಕಾರ್ಯಾಚರಣೆಯಲ್ಲಿರುವುದಿಲ್ಲ.<br><br>ಭೌತಿಕ ಮತ್ತು ತಾಂತ್ರಿಕವಾಗಿ ಬಸ್‌ಗಳನ್ನು ಸುಸ್ಥಿತಿಯಲ್ಲಿರಿಸಿಕೊಂಡು ಅವಶ್ಯವಿದ್ದಲ್ಲಿ ಕವಚ ಪುನಶ್ಚೇತನ ಕಾರ್ಯಗಳನ್ನು ಕೈಗೊಂಡು ಹಾಗೂ ಪ್ರತಿ ವರ್ಷ ನಿಗಮದ ಬಸ್‌ಗಳನ್ನು ಅರ್ಹತಾ ಪತ್ರ ನವೀಕರಣಕ್ಕೆ ಒಳಪಡಿಸಿ ಖಾತ್ರಿಪಡಿಸಿಕೊಂಡು ಕಾರ್ಯಾಚರಣೆಗೊಳಿಸಲಾಗುತ್ತಿರುತ್ತದೆ. ಹಾಗಾಗಿ ಪ್ರಸ್ತುತ ಎಲ್ಲಾ ಬಸ್ಸುಗಳು ಸುಸ್ಥಿತಿಯಲ್ಲಿರುತ್ತವೆ. |
| ಆ. | ಜಿಲ್ಲೆಯ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಸಮರ್ಪಕ ಬಸ್ ಸೌಲಭ್ಯವಿಲ್ಲದೆ ತೊಂದರೆಯಾಗುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ; | ಕಲಬುರಗಿ ಜಿಲ್ಲೆಯಲ್ಲಿಯ ಕಲಬುರಗಿ ವಿಭಾಗ-1 ಮತ್ತು ವಿಭಾಗ-2 ರಿಂದ ಒಟ್ಟು 954 ಅನುಸೂಚಿಗಳಿಂದ 6126 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ಅದರ ಪೈಕಿ ಜಿಲ್ಲೆಯ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಒಟ್ಟು 437 ಸಾಮಾನ್ಯ ಸಾರಿಗೆಗಳಿಂದ 3635 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | | ಹಾಗಾಗಿ ಪ್ರಸ್ತುತ ಇರುವ ವ್ಯವಸ್ಥೆಯು ಗ್ರಾಮೀಣ ಭಾಗದ ಸಾರ್ವಜನಿಕರ ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳ ಅವಶ್ಯಕತೆಗನುಗುಣವಾಗಿರುತ್ತದೆ. |
| ಇ. | ಕಳೆದ ಎರಡು ವರ್ಷಗಳಲ್ಲಿ ಕಲಬುರಗಿ ಜಿಲ್ಲೆಗೆ ಮಂಜೂರಾದ ಹೊಸ ಬಸ್‌ಗಳೆಷ್ಟು ಮತ್ತು ಪ್ರಸ್ತುತ ಖಾಲಿ ಇರುವ ಚಾಲಕ ಹಾಗೂ ನಿರ್ವಾಹಕರ ಹುದ್ದೆಗಳ ಸಂಖ್ಯೆ ಎಷ್ಟು; | **ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ 2023-24ರ ಪೂರ್ವದ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರಲಿಲ್ಲ ಹಾಗೂ ಸಿಬ್ಬಂದಿ ನೇಮಕಾತಿ ಆಗಿರಲಿಲ್ಲ.**<br><br>ಆದರೆ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ 2023-24ರಿಂದ ಇದುವರೆವಿಗೂ ವಿವಿಧ ಮಾದರಿಯ ಒಟ್ಟು 1173 ಬಸ್‌ಗಳನ್ನು ಸೇರ್ಪಡೆ ಮಾಡಲಾಗಿದೆ.<br><br>ಕಳೆದ ಎರಡು ವರ್ಷಗಳಲ್ಲಿ ಕಲಬುರಗಿ ಜಿಲ್ಲೆಯ ಎರಡು ವಿಭಾಗಗಳಿಗೆ 2023-24 ರಲ್ಲಿ 144 ಹಾಗೂ 2024-25 ರಲ್ಲಿ 64 ಹೀಗೆ ಒಟ್ಟು 208 ಹೊಸ ಬಸ್‌ಗಳನ್ನು ಒದಗಿಸಲಾಗಿದ್ದು, ಪ್ರಸಕ್ತ 2025-26ನೇ ಸಾಲಿನಲ್ಲಿ ಒಟ್ಟು 35 ಹೊಸ ಬಸ್‌ಗಳನ್ನು ನೀಡಲಾಗಿರುತ್ತದೆ.<br><br>ಪ್ರಸ್ತುತ ಕಲಬುರಗಿ ವಿಭಾಗ-1 ಮತ್ತು ಕಲಬುರಗಿ ವಿಭಾಗ-2 ಸೇರಿ 180 ಚಾಲಕ ಮತ್ತು ನಿರ್ವಾಹಕ ಹುದ್ದೆಗಳು ಮಾತ್ರ ಖಾಲಿ ಇರುತ್ತವೆ.<br><br>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯ ಕಲಬುರಗಿ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳು ಒಳಗೊಂಡಂತೆ ಉಳಿದ ಎಲ್ಲಾ ಘಟಕಗಳಲ್ಲಿ ನೇರ ನೇಮಕಾತಿಗೆ ಖಾಲಿ ಇರುವ ಸ್ಥಳೀಯ ವೃಂದದ ತಾಂತ್ರಿಕ ಹುದ್ದೆಗಳು ಸೇರಿ ಒಟ್ಟು 2804 ಹುದ್ದೆಗಳ ಭರ್ತಿ ಕುರಿತ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. ಹುದ್ದೆಗಳ ಭರ್ತಿಗೆ ಅನುಮತಿ ದೊರಕಿದ ಕೂಡಲೇ ನೇರ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಿ, ಭರ್ತಿಮಾಡಿಕೊಳ್ಳಲಾಗುವುದು ಹಾಗೂ ನಿಗಮದಲ್ಲಿನ ಕಲಬುರಗಿ ಜಿಲ್ಲೆಯ ವಿಭಾಗ ಬಸ್ ಘಟಕಗಳು ಒಳಗೊಂಡಂತೆ ಉಳಿದ ಘಟಕಗಳಿಗೆ ಅವಶ್ಯಕತೆಗೆ ಅನುಸಾರ ಸಿಬ್ಬಂದಿಗಳನ್ನು ನಿಯೋಜಿಸಲು ಆದ್ಯತೆಯ ಮೇರೆಗೆ ಕ್ರಮಕೈಗೊಳ್ಳಲಾಗುವುದು. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಈ.</td><td>ಶಕ್ತಿ ಯೋಜನೆಯ ನಂತರ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದ್ದು, ಈ ಒತ್ತಡವನ್ನು ನಿಭಾಯಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?</td><td>ಶಕ್ತಿ ಯೋಜನೆ ಜಾರಿಯಿಂದ ನಿಗಮದ ಸಾರಿಗೆಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆಯಲ್ಲಿ ಹೆಚ್ಚಳವಾಗಿದ್ದರಿಂದ ಅನುಸೂಚಿ/ಸರತಿಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದ್ದು, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಶಕ್ತಿ ಯೋಜನೆ ಜಾರಿ ಪೂರ್ವ ಮತ್ತು ನಂತರ ಅನುಸೂಚಿ/ಸರತಿಗಳ ವಿವರ ಕೆಳಕಂಡಂತಿದೆ.
<table>
<tr><th>ವಿವರ</th><th>ಶಕ್ತಿಯೋಜನೆ ಪೂರ್ವ</th><th>ಶಕ್ತಿಯೋಜನೆ ನಂತರ</th></tr>
<tr><td>ಒಟ್ಟು ಅನುಸೂಚಿಗಳು</td><td>4028</td><td>4740</td></tr>
<tr><td>ಒಟ್ಟು ಅನುಸೂಚಿ ಕಿ.ಮೀ (ಲಕ್ಷಗಳಲ್ಲಿ)</td><td>14.46</td><td>17.34</td></tr>
<tr><td>ಒಟ್ಟು ಸರತಿಗಳ ಸಂಖ್ಯೆ</td><td>22214</td><td>28631</td></tr>
</table>
ಶಕ್ತಿ ಯೋಜನೆ ಪೂರ್ವಕ್ಕೆ ಹೋಲಿಸಿದಲ್ಲಿ ಪ್ರತಿ ದಿನ 712 ಹೆಚ್ಚಿನ ಅನುಸೂಚಿಗಳಿಂದ 6417 ಹೆಚ್ಚುವರಿ ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>
ಕಲಬುರಗಿ ಜಿಲ್ಲೆಯಲ್ಲಿ ಶಕ್ತಿ ಯೋಜನೆ ಜಾರಿ ಪೂರ್ವ ಮತ್ತು ನಂತರ ಅನುಸೂಚಿ/ಸರತಿಗಳ ವಿವರ ಕೆಳಕಂಡಂತಿದೆ.
<table>
<tr><th rowspan="2">ಜಿಲ್ಲೆ</th><th colspan="2">ಅನುಸೂಚಿಗಳು</th><th colspan="2">ಸರತಿಗಳು</th></tr>
<tr><th>ಶಕ್ತಿ ಯೋಜನೆ ಪೂರ್ವ</th><th>ಶಕ್ತಿ ಯೋಜನೆ ನಂತರ</th><th>ಶಕ್ತಿ ಯೋಜನೆ ಪೂರ್ವ</th><th>ಶಕ್ತಿ ಯೋಜನೆ ನಂತರ</th></tr>
<tr><td>ಕಲಬುರಗಿ</td><td>789</td><td>954</td><td>4620</td><td>6126</td></tr>
</table>
ಹಾಗಾಗಿ ಕಲಬುರಗಿ ಜಿಲ್ಲೆಯಲ್ಲಿಯೂ ಶಕ್ತಿ ಯೋಜನೆ ಪೂರ್ವಕ್ಕೆ ಹೋಲಿಸಿದಲ್ಲಿ ಪ್ರತಿ ದಿನ 165 ಹೆಚ್ಚಿನ ಅನುಸೂಚಿಗಳಿಂದ 1506 ಹೆಚ್ಚುವರಿ ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.</td></tr>
</table>

ಸಂಖ್ಯೆ: ಟಿಡಿ 15 ಟಿಸಿಕ್ಯೂ 2026

(ರಾಮಲಿಂಗಾರೆಡ್ಡಿ)

ಸಾರಿಗೆ ಮತ್ತು ಮುಜರಾಯಿ ಸಚಿವರು